**ಪಿಡಬ್ಲೂಃ 1** **ಅಸಲು ದಾವೆ ನಂ. 37/2020**

ದಿನಾಂಕ 08-07-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.
**ಪಾಟೀಸವಾಲುಃ ಶ್ರೀ. ಜಿ. ಎಸ್. ಆರ್. ಕೆ. ಪ್ರತಿವಾದಿ ಪರ ವಕೀಲರಿಂದಃ-**

1. ದಾವಾ ಆಸ್ತಿಗಳನ್ನು ನನ್ನ ತಂದೆ ಗುತ್ತಿಗೆಗೆ ಬೂದೆಪ್ಪರವರಿಗೆ ಮತ್ತು ಆಂಧ್ರದ ನಾಗೇಶ್‌ರವರಿಗೆ ಕೊಟ್ಟಿರುತ್ತಾರೆ. ಅವರು ಗುತ್ತಿಗೆ ಮಾಡುವುದನ್ನು ನಾನು ನೋಡಿರುತ್ತೇನೆ.

2. ನನಗೆ ಮೂವರು ತಮ್ಮಂದಿರು ಇರುತ್ತಾರೆ. ಅವರೆಂದರೆ ಜಗದೀಶ, ನಿರಂಜನ ಮತ್ತು ರುದ್ರಯ್ಯ. ನನ್ನ ತಂದೆ ಪೂಜೆ, ಪುರೋಹಿತರು ಅಂತಾ ಕೆಲಸ ಮಾಡುತ್ತಾರೆ ಎಂದರೆ ಸರಿ.

3. ನಮ್ಮ ದು ಮಹಾ ಪಂಚಾಕ್ಷರಯ್ಯಸ್ವಾಮಿಗಳ ಮಠ ಎಂದರೆ ಸರಿ. ಈ ಮಠ 800 ವರ್ಷಗಳಿಂದ ಇದೆ ಎಂದರೆ ಸಾಕ್ಷಿಯು 4-5 ತಲೆಮಾರುಗಳಿಂದ ಅಂದರೆ 500 ವರ್ಷಗಳಿಂದ ಇದೆ ಎನ್ನುತ್ತಾರೆ. ರಾಜರಾಜೇಶ್ವರಿ ಪುರಾಣ ಪ್ರವಚನ ಮತ್ತು ದುರ್ಗಾಮಾತೆಯ ಪ್ರವಚನಗಳನ್ನು ಮಾಡುತ್ತಾರೆ ಎಂದರೆ ಸರಿ. ಆ ಮಠಕ್ಕೆ ಸುತ್ತ-ಮುತ್ತಲಿನ ಜನ ಭಕ್ತಾಧಿಗಳು ಬರುತ್ತಾರೆ ಎಂದರೆ ಸಾಕ್ಷಿ ಆಗ ಬರುತ್ತಿದ್ದರು, ಈಗ ಬರುವುದಿಲ್ಲ ಎನ್ನುತ್ತಾರೆ. ಮೊದಲು ಮಠದಲ್ಲಿ ಊಟ ನಡೆಯುತ್ತಿತ್ತು, ಈಗ ಇಲ್ಲ ಎನ್ನುತ್ತಾರೆ. ಆ ಮಠಕ್ಕೆ ಬಸಾಪುರ, ಹಂಚಿನಾಳ, ಕೋಳಬಾಳ, ಮುದ್ದಾಪುರ, ಎಲೆಕೂಡಿಗಿ, ದೀನಸಮುದ್ರ, ಹಸಮಕಲ್, ಸಿದ್ರಾಂಪುರ ಮತ್ತು 10-15 ಹಳ್ಳಿಗಳಲ್ಲಿ ಶಿಷ್ಯಂದಿರು ಇದ್ದಾರೆ ಎಂದರೆ ಸರಿ. ಆ ಭಕ್ತರು ಮಠಕ್ಕೆ ದಾನಧರ್ಮ ಮಾಡುತ್ತಾರೆ ಎಂದರೆ ಸರಿಯಲ್ಲ. ನಾನು 11 ವರ್ಷದ ಕಾಲ ತವರು ಮನೆಯಲ್ಲಿದ್ದೆ, 30 ವರ್ಷಗಳಿಂದ ನಾನು ಗಂಡನ ಮನೆಯಲ್ಲಿ ಇದ್ದೇನೆ.

4. ನಾನು ದೀಪಾವಳಿ ಆದ ನಂತರ ಮಠಕ್ಕೆ ಹೋಗಿದ್ದೆ.

5. ದಾವಾ ಆಸ್ತಿ ಯಾರಿಂದ ಹೇಗೆ, ಯಾವಾಗ ಬಂದಿತ್ತು ಎಂದು ನನಗೆ ಗೊತ್ತಿಲ್ಲ. ನನ್ನ ಮುತ್ತಾತ ವೀರಭದ್ರಯ್ಯರವರು ದೈವೀಭಕ್ತರು ಎಂದರೆ ಸರಿ. ನನ್ನ ಮುತ್ತಾತ ದೊಡ್ಡ ದೊಡ್ಡ ಪುರಾಣಗಳನ್ನು ಬರೆದಿದ್ದರು ಎಂದರೆ ಸರಿ. ಅವುಗಳೆಂದರೆ 1341 ರಲ್ಲಿ ಪುರಹಿನ ರಟ್ಟು ಕಾಲಜ್ಞಾನ, 1829 ರಲ್ಲಿ ಹಸ್ತವರ್ಣ ತಿಲಕ, ರಾಜರಾಜೇಶ್ವರಿ ನಾಟಕಗಳನ್ನು ಬರೆದಿದ್ದರು ಎಂದರೆ ಸರಿ. ಅಂದಿನಿಂದ ಇಂದಿನವರೆಗೂ ಪುರಾಣ, ಪ್ರವಚನ ನಡೆಯುತ್ತಿವೆ ಎಂದರೆ ಸರಿ.

6. ತಿರುಮಲ ರಾವ್ ಕುಲಕರ್ಣಿರವರ ಬಗ್ಗೆ ನನಗೆ ಗೊತ್ತಿಲ್ಲ. ಈಶಪ್ಪನವರ ತಾತನೆ ತಿರುಮಲರಾವ್ ಕುಲಕರ್ಣಿ ಎಂದರೆ ಸಾಕ್ಷಿಯು ಈಗ ಗೊತ್ತಾಯಿತು ಎನ್ನುತ್ತಾರೆ. ಅವರು ದಾನವಾಗಿ ಈ ಮಠವನ್ನು ನನ್ನ ಮುತ್ತಾತನಿಗೆ ಕೊಟ್ಟಿದ್ದರು ಎಂದರೆ ಸರಿ. ಪುರಾಣ, ಪ್ರವಚನ ಮಾಡುವ ಸಲುವಾಗಿ ಸದರಿ ಆಸ್ತಿಯನ್ನು ಮಠಕ್ಕೆ ಕೊಟ್ಟಿದ್ದರು ಎಂದರೆ ಸರಿ. ಮಠದಲ್ಲಿ ಪೂಜೆ ಮಾಡುವವರಿಗೆ ಆ ಆಸ್ತಿ ಇರುತ್ತದೆ ಎಂದರೆ ಸರಿ. ಈಗ ವೀರಭದ್ರಯ್ಯ ಮತ್ತು ಅವರ ಮಕ್ಕಳು ಅದನ್ನು ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿ. ಈ ಆಸ್ತಿಯನ್ನು ಅವರೇ ಊಟ ಮಾಡುತ್ತಿದ್ದಾರೆ ಎಂದರೆ ಸರಿ. ಈಗಲೂ ಸಹ ಪೂರ್ಣಿಮೆ ಮತ್ತು ಅಮವಾಸ್ಸೆಗೆ ಭಕ್ತಾದಿಗಳು ಬಂದು ಕಾಯಿಹೊಡೆಸಿಕೊಂಡು ಹೋಗುತ್ತಾರೆ ಎಂದರೆ ಸರಿ. ನವರಾತ್ರಿಯಲ್ಲಿ ಆ ದೇವಿಯ 9 ದಿನಗಳ ಪೂಜೆ ಮಾಡುತ್ತಾರೆ ಎಂದರೆ ಸರಿ. ಆಗಲೂ ಸಹ ಭಕ್ತಾದಿಗಳು ಬಂದು ಕಾಯಿಹೊಡೆಸಿಕೊಂಡು ಹೋಗುತ್ತಾರೆ ಮತ್ತು ಅಂತಿಮ ದಿನದಲ್ಲಿ ವಿಜ್ರಂಭಣೆಯಿಂದ ಪೂಜೆ ಮಾಡಿ, ಎಲ್ಲರಿಗೂ ಊಟ ಹಾಕಿಸುತ್ತಾರೆ ಎಂದರೆ ಸರಿ.

ಪ್ರತಿವರ್ಷ ಆಹ್ವಾನ ಪತ್ರಿಕೆಯನ್ನು ಮುದ್ರಿಸುತ್ತಾರೆ ಎಂದರೆ ನನಗೆ ಓದಲು ಬರುವುದಿಲ್ಲ ಎನ್ನುತ್ತಾರೆ. ಮಠದ ಆಸ್ತಿಯಲ್ಲಿ ನಿಮಗೆ ಭಾಗ ಬರುವುದಿಲ್ಲ, ಉಳಿದ ಆಸ್ತಿಯಲ್ಲಿ ಭಾಗ ಬರುತ್ತದೆ ಎಂದರೆ ಸಾಕ್ಷಿಯು ಅದೇನೋ ಗೊತ್ತಿಲ್ಲ, ಆದರೆ ಭಾಗ ಬರುತ್ತದೆ ಎನ್ನುತ್ತಾರೆ.

7. ಈಗ ಮಠದಲ್ಲಿ ನಿರಂಜನ ಸ್ವಾಮಿರವರು ಪೂಜೆ ಮಾಡಿದರೆ ನನಗೆ ಆ ಸರ್ವೆ ನಂಬರ್‌ನಲ್ಲಿ ಭಾಗ ಬೇಕಾಗಿಲ್ಲ. ಈಗಲೂ ಸಹ ಮಠದಲ್ಲಿ ನಿರಂಜನ್ ಸ್ವಾಮಿಗಳು ಪೂಜೆ ಮಾಡುತ್ತಿದ್ದಾರೆ ಎಂದರೆ ಸರಿ.

8. ಭಕ್ತಾಧಿಗಳ ಮದುವೆಯನ್ನು ಸ್ವಾಮಿಗಳು ಮದುವೆಯಿದ್ದಾಗ ಹೋಗಿ ಅಟೆಂಡ್ ಮಾಡಿ ಬರುತ್ತಾರೆ ಎಂದರೆ ಸರಿ.

9. ನನ್ನ ತಂದೆಯ 7-8 ಲಕ್ಷ ಸಾಲ ಇರಬಹುದು. 20-25 ಲಕ್ಷದ ಮನೆ ಕಟ್ಟಿಸಿರುತ್ತಾರೆ ಎಂದರೆ ಸರಿ. ನನ್ನ ಮದುವೆಯನ್ನು ನನ್ನ ತಾತ ಮಾಡಿರುತ್ತಾರೆ ಎಂದರೆ ನನ್ನ ಮದುವೆ ಮಾಡಿಲ್ಲ ಎನ್ನುತ್ತಾರೆ. ನನ್ನ ತಂಗಿ ಮತ್ತು ನಿರಂಜನ್, ಜಗದೀಶ್‌ರವರ ಮದುವೆಯನ್ನು ನನ್ನ ತಂದೆ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಮಾಡಿರುತ್ತಾರೆ ಎನ್ನುತ್ತಾರೆ. ಮನೆ ಕಟ್ಟುವುದಕ್ಕೆ ಮತ್ತು ಮದುವೆ ಮಾಡಿದ್ದಕ್ಕೆ ರೂ.10-12 ಲಕ್ಷ ಸಾಲ ಆಗಿರುತ್ತದೆ ಎಂದರೆ ಸರಿ.

10. ನನ್ನ ಮದುವೆಯ ಕಾಲಕ್ಕೆ ನನಗೆ ಬಂಗಾರ ಕೊಟ್ಟಿಲ್ಲ. ನಿಮ್ಮ ಮನೆ ಕಟ್ಟಿಸಲು ನಿಮ್ಮ ತಂದೆ ದುಡ್ಡು ಕೊಟ್ಟಿದ್ದರಲ್ಲ ಎಂದರೆ ಸಾಕ್ಷಿಯು ಕೊಟ್ಟಿಲ್ಲ ಎನ್ನುತ್ತಾರೆ. ಮದುವೆಯಾದ ನಂತರದಲ್ಲಿ ನಿಮ್ಮ ತಂದೆ ರೂ.2 ಲಕ್ಷ ಹಣ ಮತ್ತು 10 ತೊಲೆ ಬಂಗಾರ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

11. ನಿಮ್ಮ ತಾಯಿಯನ್ನ ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಏಕೆ ಮಾಡಿಸಿರುತ್ತೀರಿ ಎಂದರೆ ಸಾಕ್ಷಿಯು ನಮ್ಮ ತಾಯಿ ಅಂತಾ ಮಾಡಿರುತ್ತೇವೆ ಎನ್ನುತ್ತಾರೆ. ಆಕೆಯ ಹೆಸರಿನಲ್ಲಿ ಯಾವುದೇ ಆಸ್ತಿ ಇಲ್ಲ ಎಂದರೆ ಸರಿ.

12. ಆಸ್ತಿಯಲ್ಲಿ ಪಾಲು ಕೇಳುತ್ತೀರಿ ಅಂದರೆ ಅವರ ಸಾಲದಲ್ಲಿಯೂ ಸಹ ನೀವು ಭಾಗಸ್ಥರು ಎಂದರೆ ಸಾಕ್ಷಿಯು ಹೌದು, ಸರಿಭಾಗ ಕೊಟ್ಟರೆ ಸಾಲ ಕಟ್ಟುತ್ತೇನೆ ಎನ್ನುತ್ತಾರೆ.

13. ಗಂಗಮ್ಮ ಮತ್ತು ನಾಗಮ್ಮರವರು ಈಗ ಮೃತರಾಗಿರುತ್ತಾರೆ, ಅವರಿಗೆ ವಾರಸುದಾರರು ಇರುತ್ತಾರೆ ಎಂದರೆ ಸರಿ. ಅವರುಗಳನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

**ಈ ಹಂತದಲ್ಲಿ ಪ್ರತಿವಾದಿಗಳ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸಿಂಧನೂರು.